ಕಾವ್ಯಸಂಕ

# ಮೂಳೆಗಳು

206 ಎಲುಬುಗಳಿವೆ
ದೇಹದಲ್ಲಿ

ಪ್ರತಿ ಎಲುಬಿನ ತುಣುಕಿಗೂ
ಒಂದೊಂದು ಹೆಸರಿದೆಯೇ?

ದಿನದ ಜಂಜಾಟದಲಿ
ನಮ್ಮ ಅನುಭವಕ್ಕೆ ಬಂದಿರಬಹುದಾ
ಪ್ರತಿಯೊಂದೂ ಮೂಳೆ?

ಬೇರೊಬ್ಬರ ಕನಸಿನೊಳಗೆ
ಅಥವಾ
ಇನ್ನೊಬ್ಬರ ದೇಹದೊಳಗೆ ಇಣುಕಿ ನೋಡುವಂತೆ
ಪ್ರತಿಯೊಂದೂ ಎಲುಬಿನ ತುಣುಕಿನೊಳಗೂ
ಧುಮುಕಿ ನೋಡಿದ್ದೀರಾ?

ಇದ್ಯಾವ ತುಣುಕು
ಮನೆಯಿಂದ ನಮ್ಮನ್ನು ಬಲು ದೂರ ಕರೆದೊಯ್ಯುವುದು
ಅದೇ ಮನೆಗೆ ಮತ್ತೆ ವಾಪಸು ಕರೆತರುವುದು?

ನಮ್ಮಿಂದ ಎಷ್ಟು ಗಾವುದ ದೂರದಲ್ಲಿರಬಹುದು
ಸುಖದ ಮೂಳೆ,
ಬಲ್ಲಿರಾ ಎಲ್ಲಿರಬಹುದು ದುಃಖದ ಮೂಳೆ?

ತಾಯಿಯನ್ನಾಗಿ ಮಾಡುವ
ಅದೇ ಅವ್ಯಕ್ತ ಎಲುಬಿನ ತುಣುಕಾ
ನಿಮ್ಮನ್ನು ಸಶಕ್ತ ಮಹಿಳೆಯನ್ನಾಗಿ ರೂಪಿಸುವುದು?

206 ಮೂಳೆಗಳಿವೆ
ನನ್ನ ದೇಹದಲ್ಲಿ
ನಿಮ್ಮ ದೇಹದಲ್ಲಿ?

ನಾವೆಂದೂ ಹಂಚಿಕೊಳ್ಳದ ಮೂಳೆಗಳ
ಸಂಖ್ಯೆಯ ನೆಪದಲ್ಲಿ ಅಕ್ಕಪಕ್ಕ ಸಿಂಗರಿಸಿದ್ದೇವೆ
ಆದರೆ ಪರಸ್ಪರ ಮುಟ್ಟುವಂತಿಲ್ಲ
ಒಂದೊಂದು ಎಲುಬಿನ ತುಣುಕಿಗೂ
ನನ್ನ ಒಂದೊಂದು ಪ್ರಶ್ನೆಗಳು
ಎಂದೂ ಸಾಕಾಗುವುದಿಲ್ಲ!

# ಕೊಲ್ಲಲು ನಿಮಗೆ ಬಂದೂಕಿನ ಅಗತ್ಯವಿಲ್ಲ

ಯಾರನ್ನಾದರೂ ಕೊಲ್ಲಲು ನಿಮಗೆ ಬಂದೂಕಿನ ಅಗತ್ಯವಿಲ್ಲ
ದೇಹದ ಗುಡಿಯೊಳಗೆ ಸಣ್ಣ ತೂತು ಕೊರೆದು
ಬುಲೆಟ್ಟನ್ನು ಅದರೊಳಗೆ ತೂರಿ ಬಿಟ್ಟರೆ ಸಾಕು

ಬಂದೂಕು ತಾನೇ ತಾನಾಗಿ ಅರಳುತ್ತದೆ
ಆದರೆ ಅಂದಗೇಡಿತನ
ತನ್ನ ರಹಸ್ಯವನ್ನು ಬಿಡಿಸಿ ಹೇಳುವುದಿಲ್ಲ:
ಯಾರಾದರೂ ಹೇಗೆ ಅಡಗಿಕೊಳ್ಳುತ್ತಾರೆ ಬ್ಯಾರಿಕೇಡ್‌ಗಳ ಹಿಂದೆ
ತುಟಿ ಮೂಗು ಗಲ್ಲದ
ಒಂದು ಚುಂಬನದೂರದಲ್ಲಿ